ಕುತೂಹಲಿಗಳಾಗಿಸದೇ ಅದರಾಚೆಯದ್ದಕ್ಕೆ ಕೈಚಾಚುವಂತೆ ಪ್ರೇರೇಪಿಸುವ ಕತೆಗಾರರು. ಅವರು ಕತೆಯನ್ನು ಮುಗಿಸುವ ಪರಿಯಲ್ಲಿ ಇನ್ನು ಮುಂದಿನ ಕತೆಯನ್ನು ನೀವೇ ಊಹಿಸಿಕೊಳ್ಳಿ ಎನ್ನುವ ಬಗೆಯ ಕಥನ ತಂತ್ರ ಇದೆ ಎಂದು ತಿಳಿಯುವುದು ನಮ್ಮ ಆತುರದ ತೀರ್ಮಾನವಷ್ಟೇ ಆಗುತ್ತದೆ. ಇವು ಆ ಬಗೆಯ ಕತೆಗಳಲ್ಲ. ಅಂಥ ಕತೆಗಳನ್ನು ಸಾಕಷ್ಟು ಮಂದಿ ಬರೆದಿದ್ದಾರೆ ಮಾತ್ರವಲ್ಲ, ಹೆಚ್ಚೂ ಕಡಿಮೆ ಸಣ್ಣಕತೆಯ ಒಂದು ಸ್ಥಾಪಿತ ಲಕ್ಷಣವೇ ಅದು ಎನ್ನುವ ಮಟ್ಟಿಗೆ ಅದು ಸಾಮಾನ್ಯವಾಗಿಬಿಟ್ಟಿದೆ. ಛಾಯಾ ಅವರ ಕತೆಗಳ ಅಂತ್ಯದಲ್ಲಿ ಇರುವುದು ಕಥನ ಕುತೂಹಲದಿಂದ ಪೂರ್ತಿಯಾಗಿ ಕಳಚಿಕೊಂಡ ಒಂದು ನಿಲುವು. ಅಂದರೆ, ಛಾಯಾ ಅವರು ಇಲ್ಲಿ ಓದುಗನನ್ನು ಸಮಗ್ರವಾಗಿ ಬದುಕನ್ನು ಕಾಣಲು, ಕತೆಯ ಆದಿ–ಅಂತ್ಯದ ಚೌಕಟ್ಟಿನಿಂದ ಹೊರಗೆ ಬಂದು ದೈನಂದಿನಕ್ಕೆ ಮುಖಾಮುಖಿಯಾಗಲು ಆಹ್ವಾನಿಸುತ್ತಿದ್ದಾರೆ. ತನ್ಮೂಲಕ ಅವರು ತಮ್ಮ ಕತೆಯ ಗ್ರಹಿಕೆಗಳನ್ನು ಓದುಗ ತನ್ನ ಅನುಭವಕ್ಕೆ ಸೇರಿಸಿಕೊಳ್ಳಲು ಅನುವು ಮಾಡಿಕೊಡುತ್ತಿದ್ದಾರೆಯೇ ಹೊರತು ಬರಿಯ ಮನರಂಜನೆಗಾಗಿ ತಾವು ಕತೆ ಹೇಳುತ್ತಿಲ್ಲ ಎನ್ನುವುದನ್ನೂ ಸ್ಪಷ್ಟಪಡಿಸುತ್ತಿದ್ದಾರೆ. ಇದು ಕೂಡ ಛಾಯಾ ಭಟ್ ಅವರ ಕತೆಗಳ ಬಗ್ಗೆ ಮೆಚ್ಚುಗೆ ಮೂಡಲು ಕಾರಣ.

ಇದನ್ನೆಲ್ಲ ತಮ್ಮ ಕಥಾಜಗತ್ತಿನಲ್ಲಿ ಒಳಗೊಳ್ಳುವುದು ಸುಲಭವಲ್ಲ. ಹಾಗಾಗಿಯೇ ಈ ಕತೆಗಳಲ್ಲಿ ಜಗತ್ತು ವಿಸ್ತರಿಸುತ್ತ ಹೋಗುತ್ತದೆ, ಹಾರಿಜಾಂಟಲಿ ಮತ್ತು ವರ್ಟಿಕಲಿ. ಇದರಿಂದಾಗಿ ಏನಾಗುತ್ತದೆ ಎಂದರೆ ಅವರ ಕತೆಯ ವಸ್ತು, ಅದರ ಗಮ್ಯ ಒಂದು ಸಾಲಿನ ವ್ಯಾಖ್ಯಾನಕ್ಕೆ ಸಿಗದ ಜಾಡು ಅನುಸರಿಸುತ್ತದೆ. ಪ್ರತಿಯೊಂದು ಕತೆಯ ಪ್ರತಿಯೊಂದು ಪಾತ್ರಕ್ಕೂ ತನ್ನನ್ನು ತಾನು ಸಮರ್ಥಿಸಿಕೊಳ್ಳಲು, ವಿವರಿಸಲು, ಓದುಗನೆದುರು ಹರವಿಕೊಳ್ಳಲು ತನ್ನದೇ ಆದ ಕತೆಗಳಿವೆ ಎನ್ನುವುದೇ ಇಲ್ಲಿನ ಮಹತ್ತ್ವದ ಅಂಶ. ಸಣ್ಣಕತೆಯ ಸಿದ್ಧಮಾದರಿಗೆ ಇದು ವಿರುದ್ಧವಾಗಿದೆ, ನಿಜ. ಆದರೆ, ಪ್ರಸ್ತುತ ಕನ್ನಡದ ಸಣ್ಣಕತೆಗಳು ಈ ಸಿದ್ಧಮಾದರಿಯ ರಾಚನಿಕ ಮಿತಿಗಳನ್ನು ಒಡೆದು ಕಟ್ಟುವ ಪ್ರಕ್ರಿಯೆಯಲ್ಲಿರುವುದನ್ನು ಈಗಾಗಲೇ ನಾವು ಗಮನಿಸುತ್ತಿದ್ದೇವೆ.

ಅವರ ಈ ಕತೆಗಳಲ್ಲಿ ಕೌಟುಂಬಿಕ–ವೈಯಕ್ತಿಕ ನೆಲೆಯ ವಸ್ತುಗಳಷ್ಟೇ ಕಾಣಸಿಗುತ್ತವೆ. ವಿವರಗಳಲ್ಲಿ ಸಮಾಜವನ್ನು, ಇಡೀ ಊರನ್ನು ಒಳಗೊಳ್ಳುವ ಉದ್ದೇಶ ಕಂಡು ಬಂದರೂ, ಇಡೀ ಊರಿನ, ಸಮಾಜದ, ಸಮುದಾಯದ ಗುಣಲಕ್ಷಣವನ್ನು ಚಿತ್ರಿಸಲು ಅವರ ಲೇಖನಿ ಸಶಕ್ತವಾಗಿದೆ ಎನ್ನುವ ಹೊಳಹುಗಳು ಸಾಕಷ್ಟಿದ್ದರೂ ಅವರ ಕತೆಗಳ ವಸ್ತು, ಈ ಸಂಕಲನದ ಮಟ್ಟಿಗೆ ಎಲ್ಲೂ ಕೌಟುಂಬಿಕ ಚೌಕಟ್ಟನ್ನು ಮೀರಿ ಚಾಚಿಕೊಳ್ಳುವುದಿಲ್ಲ. ಇದನ್ನು ಮುಂದಿನ ದಿನಗಳಲ್ಲಿ ಛಾಯಾ ಭಟ್ ಮೀರುತ್ತಾರೆ ಎಂದು ನಿರೀಕ್ಷಿಸಬಹುದು.

‘ನಡೆಯುವಾಗ ಅಲುಗಾಡುವ ಕಂದೀಲಿನ ಬೆಳಕಿನಿಂದಾಗಿ ತೊನೆದಾಡುವ ನಮ್ಮ ನೆರಳಿನಂತೆ, ಕಣ್ಣಾಮುಚ್ಚಾಲೆಯಾಡಿಸಿ ಕಡೆಗೆ ಅಕ್ಷರ ರೂಪಕ್ಕಿಳಿದ ಕತೆಗಳಿವು’ ಎಂದು ಕರೆದಿದ್ದಾರೆ ಛಾಯಾ, ತಮ್ಮ ಕಥೆಗಳನ್ನು. ಇಲ್ಲಿ ಕಂದೀಲಿನ ಬೆಳಕು ನಿಜ, ಅದು ಕೊಟ್ಟ ತೊನೆದಾಡುವ ನೆರಳುಗಳು ಮಾತ್ರ ಭ್ರಮೆ. ಆದರೆ, ಭ್ರಮೆಯಿದ್ದಾಗಲಷ್ಟೇ ನಿಜಕ್ಕೂ ಒಂದು ಬೆಲೆ, ಗುರುತು, ಅಸ್ತಿತ್ವ ಎನ್ನುವುದು ಸತ್ಯ. ಛಾಯಾ ಭಟ್ ಅವರ ಕತೆಗಳು ಈ ನಿಟ್ಟಿನಲ್ಲಿ ಏನನ್ನು ಹೇಳುತ್ತಿವೆ ಎನ್ನುವುದನ್ನು ವಿಶ್ಲೇಷಿಸಿಯೇ ತಿಳಿದುಕೊಳ್ಳಬೇಕಾದ ಸವಾಲನ್ನಂತೂ ಸಮರ್ಥವಾಗಿ ಒಡ್ಡುತ್ತವೆ.